ಮೈಸೂರಂ ಮೆಷಿನರಿ ಮ್ಯಾನಂಫಾಕ್ಚರರ್ಸ್ ಕಂಪನಿಯಂ ಕಾನೂನಂ ಬಾಹಿರ ನಡುವಳಿಕೆ

೧೬೧೧. (ಉ) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನಲ್ಲಿರುವ ಮೈಸೂರಂ ಮೆಷಿನರಿ ಮ್ಯಾನ್ಯುಫ್ಯಾಕ್ಚರರ್ಸ್ (ಬೆಂಗಳೂರು) ಕಂಪನಿ ನಡೆಯದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಕಂಪನಿಯಂ ಮಾಲೀಕ ಕಾರ್ಖಾನೆಯನ್ನು ಬಿಟ್ಟು ಹೋಗಿರುವುದಂ ಮತ್ತು ಕಾರ್ಮಿಕರಂ ಪ್ರತಿದಿನ ಕೆಲಸಕ್ಕೆ ಹೋಗಿ ಕೆಲಸವಿಲ್ಲದೆ ಸಂಬಳವೂ ಇಲ್ಲದೆ ಕಾರ್ಖಾನೆಯಲ್ಲಿ ಕುಳಿತಿರುವುದಂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ಕಾರ್ಖಾನೆಯಲ್ಲಿ ಕೆಲಸ ನಡೆದು ಎಲ್ಲಾ ಕಾರ್ಮಿಕರಿಗೂ ಕೆಲಸ ಸಿಗುವಂತಾಗಲಂ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಈ) ಮಾಲೀಕನ ವರ್ತನೆ ಕಾನೂನು ಬಾಹಿರವಾಗಿರುವುದರಿಂದ, ಈ ಕಾರ್ಖಾನೆಯ ಕಾರ್ಮಿಕರಿಗೆ ಸಲ್ಲಬೇಕಾದ ಸಂಬಳವನ್ನು ಕೊಡಿಸಲು ಸರ್ಕಾರದವರಂ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ)ಸರ್ಕಾರದ ಗಮನಕ್ಕೆ ಬಂದಿದೆ

ಆ) ದಿನಾಂಕ ೫–೧೧–೮೬ ರಿಂದ ಉತ್ಪಾದನಾ ಕ್ರಿಯೆಯನ್ನು ಆಡಳಿತ ವರ್ಗದವರು ತಡೆ ಹಿಡಿದಿರುವುದು ಕಾರ್ಖಾನೆಯ ಕೆಲಸ ನಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ವಿವಾದ ವಿಷಯಗಳನ್ನು ನ್ಯಾಯ ಪ್ರಾಧಾಯಿತಿಗೆ ಒಪ್ಪಿಸಿ ಮಾಲೀಕರ ಕ್ರಮವನ್ನು ಬೀಗ ಮುದ್ರೆ ಎಂದು ಪರಿಗಣಿಸಿ ಮುಂದುವರಿಕೆಯನ್ನು ನಿಷೇಧಿಸಲಾಗಿದೆ.

ಈ) ಬೀಗ ಮುದ್ರೆ ಮುಂದುವರಿಕೆಯನ್ನು ನಿಷೇಧಿಸಿ ಸರ್ಕಾರ ಆದೇಶ ಹೊರಡಿಸಿದ ನಂತರವು ಬೀಗ ಮುದ್ರೆ ಮುಂದುವರೆದಿರುವುದರಿಂದ ಆಡಳಿತ ವರ್ಗದ ಮೇಲೆ ದಾವಾ ಹಾಕಲಂ ಕ್ರಮ ಕೈಗೊಳ್ಳಲಾಗಂತ್ತಿವೆ.

ಲಂಬಾಣಿ ತಾಂಡಗಳನ್ನು ರೆವಿನ್ಯೂ ಹಳ್ಳಿಗಳಾಗಿ ಪರಿವರ್ತಿಸುವ ಬಗ್ಗೆ

೯೯೩. ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗಾ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಲಂಬಾಣಿ ತಾಂಡಗಳ ಸಂಖ್ಯೆ ಎಷ್ಟು ?

ಆ) ಸದರಿ ತಾಂಡಗಳನ್ನು ಕಂದಾಯ ಹಳ್ಳಿಗಳನ್ನಾಗಿ ಪರಿವರ್ತಿಸಲು ಸರ್ಕಾರದವರು ಹಾಕಿ ಕೊಂಡಿರುವ ಕಾರ್ಯಕ್ರಮಂಗಳೇನಂ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ಲಂಬಾಣಿ ತಾಂಡಗಳ ಒಟ್ಟು ಸಂಖ್ಯೆ–೧೯೧೨.

ಆ) ಸದರಿ ತಾಂಡಗಳನ್ನು ಕಂದಾಯ ಹಳ್ಳಿಗಳನ್ನಾಗಿ ಪರಿವರ್ತಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.